ಇಬ್ಬರೂ ಸಂಸಾರ ಸಮೇತ ಹೋಗಿ ಮನೆ ಮಾಡಿದರು. ಚಿಕ್ಕವನಿಗೆ ಒಳ್ಳೆಯ ಶಾಲೆ ನೋಡಿ ಹಾಗೇ ಸುನಯ್‌ನಿಗೂ ವಿಶೇಷ ಶಾಲೆಗೆ ಸೇರಿಸಿದರು. ಆದರೂ ಅವರಿಬ್ಬರಿಗೂ ಅದೊಂದು ಕೊರಗು. ನಮಗೆಲ್ಲ ಚಿಂತೆ. ಅವ್ವನ ಭಾಷೆಯಲ್ಲಿ ಹೇಳುವದಾದರೆ "ಮನಿತನಕ್ಕ ಅದೊಂದು ದೊಡ್ಡ ತ್ರಾಸು."

ಕೊನೆಯವನೇ ನಾನು ಅರುಣ. ಅವ್ವನ ರೂಪವೇ ಬಳುವಳಿಯಾಗಿ ಬಂದಿತ್ತು. ನನಗೇನೂ ಕಡಿಮೆಯಾಗಲಿಲ್ಲ. ಎಲ್ಲ ತುಸು ಹೆಚ್ಚೇ ಆಯಿತೆಂದರೂ ಅಡ್ಡಿಯಿಲ್ಲ. ಪ್ರೀತಿ, ಮುದ್ದು, ಅಕ್ಕರೆ... ಎಲ್ಲ ಸಕ್ಕರೆಯೇ. ಆಗ ಹುಬ್ಬಳ್ಳಿಯಲ್ಲೇ ಪ್ರತಿಷ್ಠಿತವೆನಿಸಿದ್ದ ಬಿ.ವಿ.ಬಿ. ಎಂಜಿನಿಯರಿಂಗ್ ಕಾಲೇಜಿನಲ್ಲಿ ಮೆಕ್ಯಾನಿಕಲ್ ಎಂಜಿನಿಯರಿಂಗ್ ಓದಿದೆ. ಮುಂಬೈನಲ್ಲಿ ಎರಡು ವರ್ಷಗಳವರೆಗೆ ಒಂದು ಕಂಪೆನಿಯಲ್ಲಿ ನೌಕರಿ ಮಾಡಿದೆ. ಯಾಕೋ ಸರಿ ಹೋಗಲಿಲ್ಲ. ಅಷ್ಟರಲ್ಲೇ ಅಪ್ಪ, ಅವ್ವ ಕೂಡ "ಊರಾಗ ನಾವಿಬ್ಬರ ಮುದುಕರಾಗಿಬಿಡ್ತೇವಿ. ನಮ್ಮನ್ನ ನೋಡ್ಕೊಳಿಕ್ಕೆ ಯಾರರೇ ಬೇಕು" ಎಂಬ ವರಾತ ಆರಂಭಿಸಿದ್ದರು. ತಿರುಗಿ ಊರಿಗೆ ಬಂದು "ನಿಮ್ಮ ಸಲವಾಗೇ ಬಂದೆ" ಎಂದೆ. ಅವರಿಬ್ಬರೂ ಸಂತಸಪಟ್ಟರು. "ನಾ ಯಾರ ಕೈ ಕೆಳಗ ಕೆಲಸಾ ಮಾಡಾಂವಲ್ಲ. ಸ್ವಂತ ಉದ್ಯೋಗ ಮಾಡಾಂವ" ಎಂದೆ. ಎಲ್ಲರೂ ನನ್ನನ್ನು ಬೆಂಬಲಿಸಿದರು. ಪಿ.ವಿ.ಸಿ. ಪೈಪ್‌ಗಳ ಬೆಂಡಿಂಗ್ ಮಾಡಿ ಅವುಗಳನ್ನು ಕೇಳಿದಲ್ಲಿ ಪೂರೈಸುವ ವ್ಯವಹಾರಕ್ಕೆ ಕೈಹಾಕಿದೆ. ಅಪ್ಪ ಆನಂದದಿಂದ ಮೇಲ್ಗಡೆ ಎರಡು ಕೋಣೆಗಳನ್ನು ಇದಕ್ಕಾಗೇ ಕಟ್ಟಿಸಿಕೊಟ್ಟರು. ಆಗ ಊರಲ್ಲಿ ಅದು ಸ್ವಲ್ಪ ಹೊಸದೇ ಎನ್ನಬಹುದು. ಬಹು ಬೇಗ ಕೈ ಹಿಡಿಯಿತು. ದುಡ್ಡೂ ಸುಮಾರಾಗಿ ಬಂತು. ನನಗೇನೂ ಮನೆಯ ಖರ್ಚಿರಲಿಲ್ಲವಲ್ಲ. ಅಪ್ಪ ಎಲ್ಲ ನೋಡಿಕೊಳ್ಳುತ್ತಿದ್ದರು. ಹೀಗಾಗಿ "ಭಾಳ ಛೊಲೊ ನಡದದ" ಎಂದು ಹೇಳಿಕೊಳ್ಳುವಷ್ಟು ದುಡ್ಡು ಬಂತು. ಕನ್ಯೆಯರೂ ಬಂದರು. ಅಪ್ಪ ಕಟ್ಟಿಸಿದ ದಿವಿನಾದ ಬಂಗಲೆ 'ಬೃಂದಾವನ', ಕಾರು, ಲಾಭದಾಯಕ ಬಿಸಿನೆಸ್ ನೋಡಿ ಕನ್ಯಾಪಿತೃಗಳು 'ನಾ ಮುಂದು, ತಾ ಮುಂದು' ಎಂದರು. ಕೊನೆಗೆ ಅಳೆದೂ ಸುರಿದು ಕುಂದಗೋಳದ ಕಂದುಗಣ್ಣಿನ, ಗುಂಗುರುಗೂದಲಿನ, ಹಾಲುಬಣ್ಣದ ಸುಂದರಿ ಸುಜಾತ ಮನೆತುಂಬಿದಳು.

ಸ್ವರ್ಗವೇ ಭೂಮಿಗೆ ಇಳಿದಂತೆ ತೋರುತ್ತಿದ್ದ ದಿನಗಳವು. ಹೇಗೆ ಜಾರಿದವೋ ತಿಳಿಯಲೇ ಇಲ್ಲ. ಕೆಲಸದ ಜೊತೆ ಆಗಾಗ ಟ್ರಿಪ್ ಎಂದು ಸುಜಾತಳನ್ನು ಗೋವಾ, ಊಟಿ, ಬೆಂಗಳೂರು, ಮೈಸೂರು, ಮುಂಬೈ, ಕೇರಳ ಎಂದೆಲ್ಲಾ ತಿರುಗಿಸಿದ್ದೇ ಬಂತು. "ಸಾಕಿನ್ನ, ಬಸರೆಂಗ್ಸಿನ್ನ ಅಲ್ಲೆ ಇಲ್ಲೆ ಅಡ್ಡ್ಯಾಡಸಬ್ಯಾಡಾ. ಏನರ ಹೆಚ್ಚು ಕಡಿಮಿ ಆದರ..." ಎಂದು ಅವ್ವ ಗುರುಗುಟ್ಟಿದಾಗಲೇ ನಿಂತಿದ್ದು. ಅವಳ ಹುಟ್ಟಿದ ಹಬ್ಬ, ಮದುವೆಯ ವಾರ್ಷಿಕೋತ್ಸವ, ಯುಗಾದಿ, ದೀಪಾವಳಿ ಮುಂತಾದವುಗಳಿಗೆಲ್ಲ ಸಾಲವಾದರೂ ಚಿನ್ನದ ಆಭರಣಗಳು ಬಂದವು. ಅಪ್ಪನ ಕಣ್ಣು ಕೆಂಪಾಗಿದ್ದರೂ ಅವಳು ಬಯಸಿದಂತೆ ಸೀಮಂತಕ್ಕೆ 'ಶ್ರೀಮಂತ ಹಾರ' ಬಂತು. ಅವಳ ತವರಿನವರು ಬೆರಗಾಗಿ 'ವಾಹವಾ' ಎನ್ನುವಂತೆ ಕೊಡಿಸಿ ಕೃತಾರ್ಥನಾದೆ. ಅತ್ತೆ ಸೊಸೆಯರೂ ಅನೋನ್ಯವಾಗಿದ್ದರು. ಸುಲಭಾ ವೈನಿ ಇಲ್ಲಿದ್ದುದೇ ಕಡಿಮೆ. ಹೀಗಾಗಿ ಸೊಸೆಯ ಪಾಲಿನ ಪ್ರೀತಿ ಸುಜಾತಳಿಗೇ ಒಲಿದಿತ್ತು. ಅವ್ವ ಎಲ್ಲಾ ಕೆಲಸಗಳನ್ನೂ ಆದಷ್ಟು ತಾನೇ ಮಾಡಿಕೊಂಡು ಸೊಸೆ ಬರೀ ಸಿಂಗರಿಸಿಕೊಂಡು ಸುತ್ತಾಡಲು ಅನುವು ಮಾಡಿಕೊಡುತ್ತಿದ್ದಳು. ಅಪ್ಪ ಕೂಡ ಸೊಸೆಯ ಮೇಲೆ ಪ್ರೀತಿಯ ಸೋನೆ ಸುರಿಸುತ್ತಿದ್ದ. "ನನಗಾದ್ರ ಎಲ್ಲಾದಕ್ಕೂ ಕೊಂಕು ತಗೀತಿದ್ರು. ಈಗ ಸೊಸಿಗೆ... ಬಾರಾ ಖೂನ್ ಮಾಫ್" ಎಂದು ಅವ್ವ ನಗುತ್ತಲೇ ಚಾಟಿ ಬೀಸುತ್ತಿದ್ದಳು.